ಸಿಸಿ ನಂಃ 170/2025
ಸಿ.ಡಬ್ಲೂ 11/ಪಿ.ಡಬ್ಲೂ 6

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 170/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ತಿಪ್ಪಣ್ಣ ಕಾಂಬಳೆ |
| ತಂದೆಯ ಹೆಸರು | ಃ | ಸಹದೇವಪ್ಪ |
| ವಯಸ್ಸು | ಃ | 34 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸ ಸ್ಥಳ | ಃ | ಮುಗದ |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **22-11-2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ದಿಃ 20.10.2024 ರಂದು ಬೆಳಗ್ಗೆ ನಾನು ಕಾರಿನಲ್ಲಿ ಕೇಲಗೇರಿಯಿಂದ ಜುಬ್ಲಿ ಸರ್ಕಲ ಕಡೆಗೆ ಕಾರಿನಲ್ಲಿ ಹೊರಟಿದ್ದೆನು . ಆ ವೇಳೆಗೆ ಕೆಲಗೇರಿ ಸಂಪಿಗೆ ನಗರದ ಬಸ್ ಸ್ಟಾಪ ಬಳಿ ಒಬ್ಬ ಟ್ರಕ್ ಚಾಲಕನು ತನ್ನ ವಾಹನದ ಫೋಕಸ್ ಲೈಟನ್ನು ಹಾಕಿಕೊಂಡು ಜರ್ಮನ್ ಆಸ್ಪತ್ರೆ ಕಡೆಯಿಂದ ಕೇಲಗೇರಿ ಕಡೆ ಬಂತು . ಹಾಗೆ ಬಂದ ಟ್ರಕ ರಿಕ್ಷಾಕ್ಕೆ ಡಿಕ್ಕಿಹೊಡೆಯಿತು . ಅಪಘಾತದ ರಭಸಕ್ಕೆ ರಿಕ್ಷಾ ಪಲ್ಟಿಯಾಯಿತು . ನಾನು ಗಾಯಾಳುಗಳನ್ನು ರಿಕ್ಷಾದಿಂದ ಹೊರ ತೆಗೆದೆನು . ಒಬ್ಬ ಮಹಿಳೆಗೆ ಗಾಯವಾಗಿ ಸ್ಥಳದಲ್ಲಿ ಮೃತ ಪಟ್ಟರು . ಇನ್ನೊಬ್ಬ ವ್ಯಕ್ತಿಯ ಮುಖದ ಮೇಲೆ ಟ್ರನ ಗಾಲಿ ಹಾದು ಹೋಗಿತ್ತು . ಒಬ್ಬ ಮಗುವಿನ ಕಾಲು ಕಟ್ ಆಗಿತ್ತು . ಮತ್ತೊಬ್ಬ ಮಗುವಿನ ತಲೆಗೆ , ಕೈಗೆ ಮತ್ತು ಕಾಲಿಗೆ ಪೆಟ್ಟಾಗಿತ್ತು . ಇನ್ನೊಬ್ಬ ಮಹಿಳೆಗೂ ಕೂಡ ಪೆಟ್ಟಾಗಿತ್ತು .

ಅಪಘಾತಪಡಿಸಿದ ಲಾರಿ ಚಾಲಕನು ವಾಹನವನ್ನು ಅಲ್ಲಿಯೇ ಬಿಟ್ಟು ಓಡಿ ಹೋದನು . ಆ ಸಮಂಯಕ್ಕೆ ಲಾರಿ ಚಾಲಕನನ್ನು ನೋಡಿದ್ದೆನೆ . ಅಪಘಾತಪಡಿಸಿದ ಟ್ರಕನ ನಂಬರ ಜಿಎ-06/ಟಿ-9097 ಅಂತ ಇತ್ತು . ರಿಕ್ಷಾ ನಂಃ ಕೆಎ-25/ಡಿ-3706 ಅಂತ ಇತ್ತು . ನಂತರ ಅಂಬುಲೆನ್ಸ ತರಿಸಿ ಧಾರವಾಡದ ಸಿವಿಲ್ ಆಸ್ಪತ್ರೆಗೆ ಎಲ್ಲಾ ಗಾಯಾಳುಗಳನ್ನು ಮತ್ತು ಮೃತರ ಶವಗಳನ್ನು

ಕಳುಹಿಸಿಕೊಟ್ಟೆವು . ಅಪಘಾತವಾದಾಗ ಸಮಯ ಅಂದಾಜು ಬೆಃ 4.40 ಗಂಟೆ ಆಗಿತ್ತು . ಲಾರಿ ಚಾಲಕನು ತನ್ನ ಲಾರಿಯನ್ನು ಅತೀ ವೇಗವಾಗಿ ಮತ್ತು ಅಜಾರೂಕತೆಯಿಂದ ಚಲಾಯಿಸಿಕೊಂಡು ಬಂದು ರಿಕ್ಷಾಕ್ಕೆ ಡಿಕ್ಕಿಪಡಿಸಿದನು . ಕಾರಣ ಅಪಘಾತವಾಯಿತು . ಈ ಕುರಿತು ಪೊಲಿಸರಿಗೆ ಹೇಳಿಕೆ ನೀಡಿದ್ದೇನೆ .

ದಿಃ 21.10.2024 ರಂದು ಪೊಲಿಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಯಿಸಿ ಒಬ್ಬ ವ್ಯಕ್ತಿಯನ್ನು ತೊರಿಸಿ ಅಪಘಾತದ ದಿನ ಲಾರಿಯನ್ನು ಚಲಾಯಿಸುತ್ತಿದ್ದ ವ್ಯಕ್ತಿ ಇವನೇನಾ ಎಂದು ಗುರುತಿಸಲು ಹೇಳಿದರು . ನಾನು ಆತನನ್ನು ನೋಡಿ ಗುರುತಿಸಿದ್ದೇನೆ . ನಾನು ಆ ದಿನ ನೋಡಿ ಗುರುತಿಸಿದ ಮತ್ತು ಲಾರಿ ಚಲಾಯಿಸಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುತ್ತಾನೆ . ಈ ಕುರಿತು ಮರು ಹೇಳಿಕೆ ನೀಡಿದ್ದೇನೆ . ನಂತರ ದಿಃ 29.10.2024 ರಂದು ಒಬ್ಬ ಹುಡುಗ ತನಗಾಗಿರುವ ಗಾಯಗಳಿಂದ ಚೇತರಿಸಿಕೊಳ್ಳದೇ ಮೃತಪಟ್ಟನು ಎಂದು ತಿಳಿಯಿತು . ಈ ಕುರಿತು ನಾನು ಮರು ಹೇಳಿಕೆ ನೀಡಿದ್ದೇನೆ .

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ಟ್ರಕ ಚಾಲಕನು ಜರ್ಮನ ಆಸ್ಪತ್ರೆ ಕಡೆಯಿಂದ ಕೇಲಗೇರಿ ಕಡೆ ತನ್ನ ಲಾರಿಯನ್ನು ತನ್ನ ನಿರ್ಲಕ್ಷತದಿಂದ ಚಲಾಯಿಸಿಕೊಂಡು ಬಂದು ರಿಕ್ಷಾಕ್ಕೆ ಡಿಕ್ಕಿಪಡಿಸಿದನು ಎಂದರೆ ಸರಿ . ಗಾಯಾಳು ಒಬ್ಬ ಮಹಿಳೆಯನ್ನು ವಿಚಾರಿಸಿದಾಗ ತನ್ನ ಹೆಸರನ್ನು ರೇಣುಕಾ ಎಂದು ಮತ್ತು ಗಾಯಗೊಂಡ ಮಕ್ಕಳ ಹೆಸರು ಪ್ರಣವ ಮತ್ತು ಪೃಥ್ವಿ ಎಂದು ಸ್ಥಳದಲ್ಲಿಯೇ ಮರಣ ಹೊಂದಿದ ವ್ಯಕ್ತಿಯ ಹೆಸರು ರಮೇಶ ಹಾಗೂ ಮಹಿಳೆಯ ಹೆಸರು ಮರೆವ್ವ ಎಂದು ಹೇಳಿದರು ಎಂದರೆ ಸರಿ . ರಿಕ್ಷಾ ನಂಃ ಕೆಎ-25/ಡಿ-3725 ಅಂತ ಇತ್ತು ಎಂದರೆ ಸರಿ . ಪೃಥ್ವಿ ಎನ್ನುವವನು ದಿಃ 28.10.2024 ರಂದು

ಸಿಸಿ ನಂಃ 170/2025
ಸಿ.ಡಬ್ಲೂ 11/ಪಿ.ಡಬ್ಲೂ 6

ಮರಣ ಹೊಂದ ಬಗ್ಗೆ ತಿಳಿಯಿತು ಎಂದರೆ ಸರಿ . ಪ್ರಣವ ಎನ್ನುವವನು ಅಪಘಾತದ ದಿನವೇ ಆಸ್ಪತ್ರೆಯಲ್ಲಿ ಮರಣ ಹೊಂದ ಬಗ್ಗೆ ತಿಳಿಯಿತು ಎಂದರೆ ಸರಿ . ಈ ಕುರಿತು ಹೇಳಿಕೆಗಳನ್ನು ಕೊಟ್ಟಿದ್ದೆನೆ ಎಂದರೆ ಸರಿ .

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ ಪಿ ಎಂ ವಕೀಲರಿಂದ**

ನಾನು ಅಪಘಾತದ ಸಮಯದಲ್ಲಿ ಪ್ರಯಾಣಿಕರನ್ನು ಪಿಕ್ ಅಪ್ ಮಾಡಲು ಹೊರಟಿದ್ದೆ . ಆಗ ಸಮಯ ಬೆಳಗಿನ ಜಾವ ಅಂದಾಜು 4.40 ಆಗಿರಬಹುದು . ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿದೆ . ಲಾರಿ ಚಾಲಕನ ತಪ್ಪಿನಿಂದ ಅಪಘಾತ ಆಗಿರುವುದಾಗಿ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ . ರಿಕ್ಷಾ ಚಾಲಕನ ತಪ್ಪಿನಿಂದಲೇ ಅಪಘಾತ ಆಗಿದೆ ಎಂದರೆ ಸರಿಯಲ್ಲ . ನ್ಯಾಯಾಲಯದ ಮುಂದೆ ಇರುವ ಆರೋಪಿಯ ತಪ್ಪಿನಿಂದ ಅಪಘಾತ ಆಗಿರುವುದಾಗಿ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ . ಮೃತರ ಕುಟುಂಬಕ್ಕೆ ಪರಿಹಾರ ಸಿಗಲೀ ಎನ್ನುವ ಕಾರಣಕ್ಕಾಗಿ ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ . ಅಪಘಾತಕ್ಕೂ ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ .

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.